# ಅಕ್ಕಮಹಾದೇವಿ ಕುರಿತ ಜನಪದ ಹಾಡು

1) ಶರಣೆಂಬೆ ಮಲ್ಲಯೇಗೆ ಶರಣೆಂಬೆ ಗುರುವಿಗೆ
ಶರಣೆಂಬೆ ಮಲ್ಲಯ್ಯನ ಮಡದಿ। ಮಹಾದೇವಿಗೆ ।
ಶರಣೆಂದು ಕಲ್ಲ ಹಿಡಿದೇನ ।

ಮಲ್ಲಯ್ಯ ನಿನ್ನ ನಾಮ ಎಲ್ಲರೂ ಮಾಡ್ತಾರ
ಮಲ್ಲಯ್ಯನ ಮಡಿದಿ ಅಕ್ಕಮಹಾದೇವಿ । ನೆನೆದರ ।
ಎಲ್ಲಿಲ್ಲದ ಹಾಡು ಹರಿದಾವ.

ಕಲ್ಲಿಗೆ ಮುಕ್ಕಾಕಿ ಎಲ್ಲದೇವರ ನೆನೆದೆ
ಅಕ್ಕಮಹಾದೇವಿ ಅರಸರ | ಮಲ್ಲಯ್ಯನ
ಮುಕ್ಕಾಕಿ ಮೊದಲು  ನೆನದೇನ

ನಂಜನಗೂಡು ಚೆಂದ ನಗುವರ ಬಾಯಿ ಚೆಂದ
ಲಿಂಗ ಕಟ್ಟಿಕೊಂಡವರ ಎದಿ ಚೆಂದ । ವಿಭೂತಿ ।
ಧರಿಸಿದ **ಅಕ್ಕಮಹಾದೇವಿ** ಹಣೆ ಚೆಂದ ।

ಹಣೆಯ ಮೇಲೆ ವಿಭೂತಿ ಹಚ್ಚಾಕಿ ನೀನು
ಕೈಯಲ್ಲಿ ರುದ್ರಾಕ್ಷಿ ಇಡಾಕಿ ನೀನು । ಅಕ್ಕಮಹಾದೇವಿ ।
ಕೊರಳಲ್ಲಿ ರುದ್ರಾಕ್ಷಿ ಹಾಕಾಕಿ ನೀನು |

2)  ಆತ್ಮ ಜ್ಯೋತಿ ಅರಳಿ ನೀತಿ ತತ್ವ ನುಡಿದ
ತಾಯಿಯೇ ಅಕ್ಕಮಹಾದೇವಿಯೇ ।

ಯೋಗ ತ್ಯಾಗ ನಿನ್ನ ಮಾರ್ಗ
ಮುಂದು ಮುಂದೆ ಸಾಗಿದೆ |
ಕವನ ಹಾಡಿ ಶಿವನ ಕೂಡಿ
ಭುವನವನ್ನು ಬೆಳಗಿದೆ |

ಧನ್ಯ ಶರಣಿ ನಿನ್ನ ದೇವ
ಚೆನ್ನಮಲ್ಲಿಕಾರ್ಜುನ ಚೆನ್ನಮಲ್ಲಿಕಾಜುನ ।

ಆತ್ಮ ಸಾಕ್ಷಾತ್ಕಾರ ಪಡೆದ ಶರಣಿಯೆ
ಅಕ್ಕಮಹಾದೇವಿಯೇ ಅಕ್ಕಮಹಾದೇವಿಯೇ ।।

3) ಅಕ್ಕಮಹಾದೇವಿಯನ್ನು ಅಕ್ಕರೆಯಿಂದ ಕರೆತಂದು ಹಿರಿಯರೆಲ್ಲರು
ಕೂಡಿ ಚೊಕ್ಕ ಗುಣವನು ಪಾಡಿದರು ॥

ಜೋ ಜೋ ಜೋ ಜೋ ಅಕ್ಕಮಹಾದೇವಿ

ತಾಯಿ ಮಡಿಲ ತುಂಬಿ ಬಂದ ಮನಕೆ
ಆನಂದ ತಂದ ಆನಂದ ಕಂದಾ ಜೋ ಜೋ ||

ಬಂಗಾರ ವರ್ಣ ಶೃಂಗಾರ ತಾಣ
ಉಡುತಡಿ ಗ್ರಾಮದಲ್ಲಿ ಜನಿಸಿದೆಯಮ್ಮ ||

ಆಚಾರವಂತೆ ನೀನಾದೆ ಪುನೀತೆ
ಶರಣಸಂಕುಲಕೆಲ್ಲ ಅಕ್ಕ ನೀನಾದೆ |

4) ಅಕ್ಕಮಹಾದೇವಿಗಾರತಿ ಬೆಳಗುವ ಬಾರೆ
ಬೆಳಗುವ ಬಾರೆ ಭಾರತಮಾತೆಗೆ |
ದುಷ್ಟ ಮಹಿಷಾಸುರನ ಹೊಟ್ಟೆಯ ಸೀಳಿ
ದುರ್ಗಿ ಅವತಾರವ ತಾಳಿದ ತಾಯಿಗೆ ||

ಚಂಡಮುಂಡರ ರುಂಡವ ಕಡಿದು
ಚಂಡಿ ಅವತಾರ ತಾಳಿದ ತಾಯಿಗೆ |
ರಕ್ತಬೀಜನ ರಕ್ತವ ಕುಡಿದು
ಶಕ್ತಿ ಅವತಾರ ತಾಳಿದ ತಾಯಿಗೆ ||

5) ಹೌದವ್ವಾ ಮಹಾದೇವಿ ಸಣ್ಣಾಕಿ ನೀನು
ಗುರುವಿನ ಸೇವೆ ಮಾಡಾಕಿ ನೀನು |

ದಡಿಯಿಲ್ಲದ ಸೀರೆ ಉಡಾಕಿ ನೀನು
ರಂಗಿಲ್ಲದ ಕುಪ್ಪಸ ತೊಡಾಕಿ ನೀನು ।
ಹಣೆಯ ಮೇಲೆ ವಿಭೂತಿ ಹಚ್ಚಾಕಿ ನೀನು

ಕೈಯ್ಯಲ್ಲಿ ರುದ್ರಾಕ್ಷಿ, ಇಡಾಕಿ ನೀನು ।
ಶ್ರೀ ಶೈಲ ಗುಡ್ಡಕ್ಕೆ ಹೋಗಾಕಿ ನೀನು
ಕದಳಿಯ ವನವನು ಸೇರಾಕಿ ನೀನು |

6) ನಿನ್ನ ಧೈಯ್ಯವೆಂತದೋ ನಿನ್ನ ಸ್ಯೆರವೆಂತದೋ
ನೀನು ನೆಚ್ಚಿನಡೆದ ಮೋಘ ಮೋಕ್ಷವೆಂತದೇ

ನಿನ್ನ ಸರಿ ಭಕುತಿ ಝುರಿ ಮುಕುತಿ ಸರಿ
ಇನ್ನಾರದೋ ಇನ್ನುವರೆಗೆ ತೋರದೋ
ಚೆನ್ನಮಲ್ಲಿಕಾರ್ಜುನನಿಗೆ ನೀನೆ ಕಣ್ಮಣಿ
ನೀನೆ ಶಿವಾನುಭವ ಮಂಟಪದ ಕಣ್ಮಣಿ
ನಿನ್ನ ನುಡಿ ಹೊನ್ನ ಕಿಡಿ ರಸದ ಕುಡಿ.

ಅಕ್ಕನ ದಿನವಿದು ಅಹುದೇನೆ ಇಲ್ಲಿ
ಅಕ್ಕನು ಬಂದಿರಬುಹದೇನೆ ||

ಅಕ್ಕನು ಎಂತ ಚಿಕ್ಕವಳೆ
ಮುಕ್ತಿಯ ಪಡೆದಹಳೆ
ತನ್ನಯ ಸನಿಹ ಬಂದಿಹಳೇ ||
ಉನ್ನತ ಮೋಕ್ಷವ ಕೊಟ್ಟವಳೇ
ತನ್ನಯ ಬಳಗದ ಭಕ್ತಿಯವಳೆ
ಕನ್ನಡ ನಾಡಿನ ಶಕ್ತಿಯವಳೆ ||

ಮಹಾದೇವಿ ಅಕ್ಕ ಬಾರೌ
ಇಹ ಪರದ ಸುಖವ ತೋರೌ ।
ಹನ್ನೆರಡು ವರುಷದಾಕೆ
ತಾಯಿ ತಂದೆ ಆಜ್ಞೆ ಮೀರಿ
ಅಡವಿಯ ಸಂಚಾರವಾದೆ | ಮಹಾದೇವಿ ಅಕ್ಕ ಬಾರೌ ।

## ಅಕ್ಕನ ಪೂಜಾ ಹಾಡು

1)ಪೂಜಾ ಮಾಡೋಣ ಬನ್ನಿರೆ
ಅಕ್ಕಮಹಾದೇವಿ ಸೇವಾ ಮಾಡೋಣ ಬನ್ನಿರೆ ।।ಪ।।

ಜಾಜಿ ಮಲ್ಲಿಗೆ ತಂದು ಮಿಗಿಲ ಮುತ್ತೈದೆಯರು
ಕೂಡಿ ನೋಡಿ ಆಕೃತಿಯಿಂದ ||1||

ಪತಿವ್ರತಾ ಹೆಣ್ಣು ಮಕ್ಕಳಿಗೆ ಈ ಪೂಜಾ ಪಾವನ
ಅಕ್ಕನ ಬಳಗಕೆ ವರವಾದ ಈ ಪೂಜಾ ||2||

ದುಷ್ಟ ಜನರಿಗೆ ದೂರಾದ ಈ ಪೂಜಾ
ಸಾಧು ಸಜ್ಜನರಿಗೆ ಸಾಧನ ಈ ಪೂಜಾ ||3||

ಅಜ್ಞಾನಿ ಮಾನವನಿಗೆ ಅರಿಯಾದ ಈ ಪೂಜಾ
ಸುಜ್ಞಾನಿ ಜನರಿಗೆ ಸುಖದ ಈ ಪೂಜಾ |4||

ಶ್ರೀಶೈಲ ಸ್ಥಳದಲಿ ಶಿವಲಿಂಗನ ಪೂಜಾ
ಅಕ್ಕನ ಬಳಗಕ್ಕೆ ವರವಾದ ಈ ಪೂಜಾ ||5||

2) ಮಲ್ಲಯನ ಪಾದದೊಳು ಬೆರದಂಥ ತಾಯಿ
ಜಯ ಜಯ ತಾಯಿ ಅಕ್ಕಮಹಾದೇವಿ
ಜಯವೆಂದು ತಾಯಿ ವಂದಿಸುವೆವು ॥ಪ॥

ಉಡುತಡಿಯೊಳು ತಾಯಿ ಸಿರಿತನದೊಳು ಜನಿಸಿ
ಮಹಿಳೆಯರ ಜನುಮ ಪಾವನ ಮಾಡಿದೆ ||1|

ಅರುಣ ಭರಣಿಯೇ ದುರಿತ ಸಂಹರಿಣಿಯೇ
ವೈರಾಗ್ಯ ಮೂರ್ತಿಯೇ ಭಾಗ್ಯದ ತಾಯಿ ನೀನು |2||

ಅಲ್ಲಮಪ್ರಭು ಬಸವಾದಿ ಸಿದ್ದರಾಮರ ಕೂಡ
ವಾದಿಸಿ ಚಿಕ್ಕ ತಾಯಿ ಅಕ್ಕನೆನಿಸಿದೀ ||3||

ಅನಸೂಯೆ ನೀಲಮ್ಮಾ ಮಲ್ಲಾಂಬೆ ಎಲ್ಲರೊಳ್
ಚಿಕ್ಕ ಬಾಲೆ ತಾಯಿ ಮಿಗಿಲೆಯೆನಿಸಿದೆ ||4||

ಭಕ್ತಿ ನೀಡುವೆವು ಶಕ್ತಿ ಕೊಡು ತಾಯಿ
ಮುಕ್ತಿಕೊಟ್ಟು ಸಲಹು ನಮ್ಮ ಬಳಗಕೆ 5||

ಅಂಗವೇ ಲಿಂಗವಾಗಿ ಲಿಂಗವೇ ನೀನಾಗಿ
ಮಲ್ಲಯ್ಯನ ಪಾದದೊಳು ಬೆರೆದಂಥ ತಾಯಿ 6||

3)ಅಕ್ಕಮಹಾದೇವಿ ನೀ ಶಂಭು ಶಂಕರಿ
ಶುಕ್ರವಾರ ದಿವಸ ಪೂಜೆಗೈವೆ ಶುಭಕರಿ ॥ಪ॥

ಅನುಭವ ಮಂಟಪದ ದಿವ್ಯ ಧರಿಸಿದೆ
ಧೀರ ಅಲ್ಲಮರ ಎದುರ ವಾದ ಬೆಳೆಸಿದೆ ||1||

ಶೀಲ ಆಚಾರವೆಂದು ವಾದ ಬೆಳೆಸಿದೆ
ನೋಡ ಜನರ ಮೂಗು ಮುರಿದು ಮೇಲೆ ಏರಿದೆ ||2||

ಶೀಲ ನಡತೆ ಎಂಥದೆಂದು ಮಾಡಿತೋರಿದಿ
ಮೂಢ ಜನರ ಮೂರ್ಖತನಕೆ ಬೆಂಕಿ ಹಚ್ಚಿದಿ ||3||

ನಿನ್ನ ತತ್ತ್ವವ ಕಾಣದವರು ಕಿವುಡರಿರುವರು
ನಿನ್ನ ವಚನ ಕೇಳದವರು ಕಿವುಡರಿರುವರು ||4||

ನಿನ್ನ ವೈರಾಗ್ಯತನವು ಎಮಗೆ ನೀಡಮ್ಮಾ
ಕಾಡು ದಾರಿಯಲಿ ಎಮಗೆ ಪಾರು ಮಾಡಮ್ಮಾ ||5||

ಪುಣ್ಯಗ್ರಾಮ ಹಿಪ್ಪರಗಿಯಲ್ಲಿ ಶ್ರೀಗಳು
ನಿನ್ನ ತತ್ತ್ವ ಕೇಳಿ ದೂರದಿಂದಲೇ ||6||

ಎದೆಯ ತಟ್ಟಿ ಹೃದಯ ಬಿಚ್ಚಿ ಶೂರರೆಲ್ಲರು
ಕೇಳಿ ಜ್ಞಾನ ಜಾಣರೆಲ್ಲಾ ಧನ್ಯರಾದರು ||7||

ಕ್ರೂರಜನರ ಹಿಂಸೆಸಹಿಸಿ ಮಲ್ಲಿನಾಥರು
ನಿಂದೆ ಅಪವಾದಗಳಿಗೆ ಕುಂದದಾದರು ||8||

ವೀರವಿರಾಗಿ ಬ್ರಹ್ಮಚಾರಿ ತ್ಯಾಗಿಯೋಗಿಯು
ಪಶುಗಳೇನು ಬಲ್ಲವರಿವರು ದಿವ್ಯರೂಪರು||19||

ತತ್ತ್ವವನ್ನು ಕಾಯ್ದುಕೊಂಡು ಇರುವರಿವರು
ನಿನ್ನ ತತ್ತ್ವದಂತೆ ನಡೆವ ಪುಣ್ಯಪುರುಷರು||10||

ತಂದೆ ತಾಯಿಗೆ ನೀನೆ ಎಮಗೆ ಬ್ರಹ್ಮರೂಪವು
ಭವದ ಬಲೆಯ ಬಿಡಿಸೆಂದು ಬೇಡುತಿರುವೆವು||11॥

## ಅಕ್ಕನ ವೈರಾಗ್ಯದ ಹಾಡು :

ಹೌದವ್ವಾ ಮಹಾದೇವಿ ಸಣಕಿ ನೀನು
ಗುರುವಿನ ಸೇವೆ ಮಾಡಕ್ಕಿ ನೀನು ॥ಪ॥

ದಡಿಯಿಲ್ಲದ ಸೀರೆ ಉಡಕ್ಕಿ ನೀನು
ರಂಗಿಲ್ಲದೆ ಕುಪ್ಪಸ ತೊಡಕ್ಕಿ ನೀನು ||1||

ಹಣೆಯ ಮೇಲೆ ವಿಭೂತಿ ಹಚ್ಚಕಿ ನೀನು
ಕೈಯಲ್ಲಿ ರುದ್ರಾಕ್ಷಿ ಇಡಕ್ಕಿ ನೀನು ||2||

ಹಣೆಯ ಮೇಲೆ ಗಂಧ ಹಚ್ಚಕಿ ನೀನು
ಕೊರಳಲ್ಲಿ ರುದ್ರಾಕ್ಷಿ ಹಾಕಾಕಿ ನೀನು ||3||

ಶ್ರೀಶೈಲ ಗುಡ್ಡಕ್ಕೆ ಹೋಗಕಿ ನೀನು
ಕದಳಿಯ ವನವನು ಸೇರಕಿ ನೀನು ||4||

## ಅಕ್ಕಮಹಾದೇವಿ ನೋಡಿರೇನ್ :

ಅಮವಾಸಿ ದಿನ ಚಲೋ ಹೊಳೆ ನೀರ ತರಲ್ಯಾಕ್
ಅಕ್ಕಮಹಾದೇವಿ ಜಳಕಕ ಶಿವಶಂಕರಲಿಂಗ ॥ಪ॥

ಸೋಮವಾರ ದಿವಸ ಚಲೋ ಗೋಮೂತ್ರ ತರಲ್ಯಾಕ
ಅಕ್ಕಮಹಾದೇವಿ ಅಭಿಷೇಕಕ ಶಿವಶಂಕರಲಿಂಗ ||1||

ಮಹಾದೇವಿ ಜಡೆಯ ಬಿಟ್ಟು ಕಾಲಪಾದವ ಮುಟ್ಟಿ
ಅಕ್ಕಮಹಾದೇವಿ ಒಪ್ಪುವಳೇ ಶಿವಶಂಕರಲಿಂಗ ||2||

ಅಕ್ಕಮಹಾದೇವಿ ಹುಲಿಕರಡಿ ಬದಿಯಲಿ ಏಳಡಿ ಸರ್ಪ
ಅಕ್ಕಮಹಾದೇವಿ ಹೆದರುವಳೇ ಶಿವಶಂಕರಲಿಂಗ ||3||

ಮಹಾದೇವಿ ತಾಯಿತಂದೆ ಮಹಾದೇವಿ ಅಣ್ಣ ತಮ್ಮರು
ಅಕ್ಕಮಹಾದೇವಿ ಹುಡುಕುವರ ಶಿವಂಶಂಕರಲಿಂಗ ||4||

ಗಿಡದಾನ್ ಮುಗಿಲಾನ ಪಕ್ಷಿ ವನದ ಪಕ್ಷಿ
ಅಕ್ಕಮಹಾದೇವಿ ನೋಡಿರೇನ್ ಶಿವಶಂಕರಲಿಂಗ ||5||

## ಅಕ್ಕನ ಕಥನ ಗೀತೆ :

1)ಓ ದೇವಿ ಓ ದೇವಿ ಅಕ್ಕಮಹಾದೇವಿ
ಓ ತಾಯೆ ಬಂದಿ ನೀ ವೈರಾಗ್ಯದೇವಿ ॥ಪ॥

ಶಿವನಭಕ್ತರ ಮನೆಯ ಶಿಶುವಾಗಿ ಜನಿಸಿ ಕವನ ಹಾಡಿ
ತೆರದಿ ರೂಪದ ರಾಶಿ ಯುವ್ವನದಿ ಬೆಳಗಿದೆ ಸೌಂದಯ್ಯ ಸೂಸೆ
ಭೂಮಿಪಾಲ ಕೌಶಿಕನು ಸುಳಿದಾನು ಭ್ರಮಿಸಿ ||1||

ದೊರೆಯೂನಿಟ್ಟಾನು ಕಾಮುಕದೃಷ್ಟಿ ವೈರಾಗ್ಯ ತುಂಬಿತು
ನಿನ್ನಯ ದೃಷ್ಟಿ ಅರಿವೆಗಳ ಬಿಸುಟಿದೆ ಮೋಹದ ಬಿಟ್ಟು
ಸುರಿಸಿ ಹರಿಸಿದೆ ಭಕ್ತಿಯ ವೃಷ್ಟಿ ||2||

ಸುತ್ತುತ ಸುಳಿಯುತ ನಾಡಕಾಡನ್ನು ನಿತ್ಯಾದಿ ಅರೆಸಿದೆ
ಮನದಿ ಚೆನ್ನರಸನನು ಚಿತ್ತದಿ ಚನ್ನಮಲ್ಲಿಕಾರ್ಜುನನ್ನು
ನಿತ್ಯಾತ್ಮನನು ಕಂಡು ಪಡೆದೆ ಜ್ಞಾನವನು ||3||

ತೊಳಲಿದೆ ಬಳಲಿದೆ ವೈರಾಗ್ಯಮೂರ್ತಿ ಬೆಳಗಿತು ಜಗವನ್ನು
ನಿನ್ನಯ ಕೀರ್ತಿ ಲಲನೆಯ ಮೋಹವ ಬಿಟ್ಟು
ಸುರಿಸಿ ಹರಿಸಿದೆ ಭಕ್ತಿಯ ಸೃಷ್ಟಿ ಚಿತ್ರವದು ||4||

ಶರಣರ ಕಲ್ಯಾಣಕೆ ಬಂದು ಅಲ್ಲಮ ಆಜ್ಞೆ
ಮನತಂದು ಅನುಭವ ಮಂಟಪದ ನೇಮಕಸಿಂಧು
ಅನುದಿನ ಸುರಿಸಿದೆ ಜ್ಞಾನದ ಸಿಂಧು ।।5||

ಕಾಮನದ ಹೆಸರಿನಲ್ಲಿ ಪ್ರೇಮದ ಆಟ ಕಾಮವೇ

ತುಂಬಿಹದು ಪ್ರೇಮಗಳ ನೋಟ ಜನಮನವೇ
ಮುತ್ತಿಹುದು ಮರೆಯದ ಮಾಟ ಉಣಿಸೋಣ ಜನನಿ
ಅರಿವಿನ ಊಟ ||6||

2)ದರುಶನವಾಗಬಾರಮ್ಮಾ
ಅಕ್ಕಮಹಾದೇವಿ ತಾಯಿ ತೋರ ಬಾರಮ್ಮಾ ॥ಪ॥

ಭೋಗತ್ಯಾಗವ ಮಾಡಿ
ಯೋಗ ಸಾಧನೆ ನೀಡಿ
ಹಸಿವೆ ಗಿಸಿವೆಗಳನ್ನು ಮರೆತು
ಪರಮಾತ್ಮನಲ್ಲಿ ಬೆರೆತ ತಾಯಿ ||1||

ಸತ್ಯಶರಣೆಯು ನೀನು
ಶಿವನನೆಂಟಳು ನೀನು
ಮಲ್ಲಿಕಾರ್ಜುನನ ಮಡದಿ ನೀನು
ಸತ್ಯದ ದಾರಿ ತೋರಬಾರಮ್ಮಾ ||2||

ಕದಳಿಯ ಬೆಟ್ಟ ಅಲ್ಲಿದೆ ದೇವಿಯ ಬೆಟ್ಟ
ಬಂದ ಜನರಿಗೆ ದರುಶನಕೊಟ್ಟು
ಪಾಪಗಳನ್ನು ದೂರ ಮಾಡಿದೆ ತಾಯಿ
ನಿಜರೂಪವ ತೋರು ಬಾ ತಾಯಿ ||3||

## ಅಕ್ಕನ ಸೋಬಾನದ ಹಾಡು :

ಕಾಯಬೇಕ್ ಕಾಯಬೇಕ್ ಯಾತರ ಕಾಯಬೇಕ್ ॥ಪ||

ಲಿಂಬೆಯ ಒಂದ್ಯೆದ್ ಗೊನಿಯಬೇಕ್ ಸೋಬಾನವ
ಲಿಂಬೆಯ ನೀ ಐದ್ ಗೊನಿಯಬೇಕ್ ಮಹಾದೇವಿಗೆ
ರಂಬೆಯರು ಬಂದು ಉಡಿಯ ತುಂಬಬೇಕ್ | ಸೋಬಾನವ ||1||

ಟೆಂಗಿನ್ ಒಂದ್ಯೆದ್ ಗೊನಿಯಬೇಕ್ ಸೋಬಾನವ
ಟೆಂಗಿನ್ ನೀ ಐದ್ ಗೊನಿಯಬೇಕ್ ಮಹಾದೇವಿಗೆ
ತಂಗಿಯರು ಬಂದು ಉಡಿಯ ತುಂಬಬೇಕ್ | ಸೋಬಾನವ ||2||

ಹತ್ತಿಯ ಒಂದ್ಯೆದ್ ಗೊನಿಯ ಬೇಕ್ ಸೋಬಾನವ
ಹತ್ತಿಯ ನೀ ಐದ್ ಗೊನಿಯ ಬೇಕ್ ಮಹಾದೇವಿಗೆ
ಅತ್ತೀವ್ವ ಬಂದು ಉಡಿಯ ತುಂಬಬೇಕ್ ಸೋಬಾನವ ||3||

ಬಿತ್ತಿದ ಹೊಲದಾಗ ಮುತ್ತ ಸೋರ್ಯಡಿದಂಗ
ಸುಮತಿ ನಿನ್ನ ಅಳಿಯ ಬರತಾನ ಸೋಬಾನವ

ಸುಮತಿ ನಿನ್ನ ಅಳಿಯ ಬರತಾನ ಮನೆಯೊಳಗ
ಎರದ ಮಡಿಯ ಉಡಿಸ್ ಮಗಳಿಗೆ ಸೋಬಾನವ ||4||

ಹರಗಿದ ಹೊಲದಾಗ್ ಹವಳ ಸೋರಾಡಿದಂಗ
ನಿರ್ಮಲಶೆಟ್ಟಿ ನಿನ್ನಳಿಯ ಬರತಾನ ಸೋಬಾನವ
ನಿರ್ಮಲಶೆಟ್ಟಿ ನಿನ್ನಳಿಯ ಬರತಾನ ಸೋಬಾನವ
ಹೆಣ್ಣು ಕೊಟ್ಟ ಕೈಯ ಬಿಡಬ್ಯಾಡವೇ ಸೋಬಾನವ ||5||

## ಅಕ್ಕನ ಕೋಲಾಟದ ಹಾಡು:

ಎಳೋಳ ಗಣಪಣ್ಣ ಎಷ್ಟೊತ್ತ ಮಲಗೀದಿ
ಕರಿಬಂದರ ನನ್ನ ತವರವರ ಕೋಲೆನ್ನ ಕೋಲ
ಕರಿಬಂದರ ನನ್ನ ತವರವರ ಕೋಲೆನ್ನ ಕೋಲ
ಕೂಡ್ಯಾಡು ಗೆಳತಿ ಸುಖಿನ್ನೈದ್ ಕೋಲೆನ್ನ ಕೋಲ
ಕೂಡ್ಯಾಡು ಗೆಳತಿ ಸುಖಿನ್ನೈದ್ ಕೋಲೆನ್ನ ಕೋಲ ||ಪ||

ಮಹಾದೇವಿ ಅಕ್ಕ ಬಾರೇ
ಮುಕ್ತಿಯ ಮಾರ್ಗವ ತೋರೆ
ಕೂಡ್ಯಾಡು ಗೆಳತಿ ಸುಖಿನ್ನೈದ್ ಕೋಲನ್ನ ಕೋ ||1||

ವಚನಗಳ ಮಳೆಯ ಸುರಿಸಿ
ಶಿವಶರಣರೊಳಗ ಜನಿಸಿ
ಸ್ತ್ರೀ ಕುಲದಿ ನೀನು ಜನಿಸಿದೆ ಕೋಲನ್ನ ಕೋಲ ||2||

ಶ್ರೀ ಶೈಲಗಿರಿಯ ನೇರಿ
ಕೆಂಜೆಡೆಯ ಶಿವನ ಸೇರಿ
ಶಾಶ್ವತ ಶಿಖರವನೇರಿದೆ ಕೋಲನ್ನ ಕೋಲ ||3||

## **ಅಕ್ಕನ ಅಧ್ಯಾತ್ಮ ಹಾಡು** :

ಅಕ್ಕಮಹಾದೇವಿ ಎಂತಾಕೆವ್ವಾ
ನೋಡಿದರ ಸಣ್ಣಕೆವ್ವಾ ||ಪ||

ಸೃಷ್ಟಿಯೊಳಗ ಹುಟ್ಟಿದಳವ್ವಾ
ಇಷ್ಟಲಿಂಗದಿ ಜನಿಸಿದಳವ್ವಾ
ಶ್ರೇಷ್ಠವಾಗಿ ಗುರುವಿನ ಪಾದ
ಗಟ್ಟಿಯಾಗಿ ಹಿಡಿದಳವ್ವಾ ಮನದಾಗವ್ವಾ ||1||

ವೈರಾಗ್ಯವೆಂಬ ಸೀರೆಯನ್ನುಟ್ಟು

ತಂದೆ ತಾಯಿಯ ಮೋಹವ ಬಿಟ್ಟು
ಮಾನ ಅಭಿಮಾನವ ಬಿಟ್ಟು
ಅಡವಿ ಅರಣ್ಯ ತಿರುವುತ ಹೋದಳವ್ವಾ ||2||

ಅಂದ ಮಾತಿಗೆ ಅಳುಕಲಿಲ್ಲಾ
ಮುಂದೆ ನಿಂತ ಹೆದರಲಿಲ್ಲಾ
ಹೆಚ್ಚು ಕಡಿಮೆ ಎನ್ನಲಿಲ್ಲಾ
ಯಾರು ನೆದರೆತ್ತಿ ನೋಡಲಿಲ್ಲವ್ವಾ ||3||

ಶ್ರೀ ಗಿರಿಯೆಂಬ ಕದಳಿಯ ವನವ ಹೊಕ್ಕ
ನೋಡ್ಯಾಳ ಅಕ್ಕಮಹಾದೇವಿ
ಅಲ್ಲಿ ಚೆನ್ನಮಲ್ಲಿಕಾರ್ಜುನ ಕಂಡಳಾಕಿ
ಅಲ್ಲಿ ಶಮನ ಹೊಂದಿದವಳವ್ವಾ ||4||

## ಅಕ್ಕನ ಮಂಗಳಾರತಿ ಪದ :

1)ಮಂಗಲ ಮಾಡುವೆ ಶ್ರೀ ಮಹಾದೇವಿಗೆ
ಶ್ರೀ ಮಹಾದೇವಿಗೆ ಮಹಾಶಿವಶರಣೆಗೆ ॥ಪ॥

ಧರೆಯೊಳು ಪಾವನಗೊಳಸಲು ಬಂದೆ
ವಿರತಿಯ ಮೂಲವನು ತಿಳಿಸಲು ಬಂದೆ ||1||

ಬಂಧನ ಹರಿಸುವ ಶಾಂಭವಿ ನೀನು
ಭಕ್ತಿಯೇ ಬೇಡುವೆ ನಿನ್ನೊಳು ನಾನು ||2||

2) ಈ ಶುಭ ಯೋಗಾ ಈ ಶುಭ ದಿನ ಮಹಾದೇವಿಯ ಈ ಜನ್ಮಾ
ಜ್ಯೋತಿಯರೆಲ್ಲರು ಪ್ರೇಮದಿ ಕೂಡಿ ಆರುತಿ ಬೆಳಗುವಾ ವಸಂತ
ಋತು ಪಕ್ಷಿಯ ಕಿಲಿಕಿಲಿ ಸುರಿಸಿರಿ ಸುರಿ ಮಳೆಯ ॥ಪ॥

ನಿರ್ಮಲ ಸುಮತಿ ಪ್ರೇಮದ ಕುವರಿ ವೈರಾಗ್ಯದ ನಿಧಿಯೇ
ವಿರಕ್ತ ಮೂರ್ತಿ ಪರಮಪಾವನ ತೇಜದ ಮೂರ್ತಿಯೇ ||1||

ಕ್ರಾಂತಿಯ ಕಾಯಕೆ ಶರಣಾರ ಪ್ರಿಯಸೆಳವ
ಅಂಗಲಿಂಗದ ಸಮರಸವನ್ನು ಬೇಗನೇ ಅರಿತವಳೇ ||2||

ಶರಣರ ವಚನ ಸಾಹಿತ್ಯಗಳ ಘನತೆಯ ತೋರಿದವಳೇ
ಪರಮಾನಂದಾ ಬ್ರಹ್ಮಾನಂದಾ ಸುಖವ ಪಡೆದವಳೇ ||3||

ಪರಮಾನಂದಾ ಬ್ರಹ್ಮಾನಂದಾ ಹೆಸರು ಪಡೆದವಳೇ
ಚೆನ್ನಮಲ್ಲಿಕಾರ್ಜುನನಲಿ ಬೆರೆತವಳೆ ||4||

3)ಓಂ ಶಿವ ಸಾಂಬಶಿವ ಎನ್ನುತಿರಬೇಕು
ಓಂ ಶಿವ ಸಾಂಬಶಿವ ಎನ್ನುತಿರಬೇಕು ॥ಪ॥

ತುಂಬಿದ ಕೊಡವೊಂದು ಮುಂದಿರಬೇಕು
ಬಾರೇ ಅಕ್ಕಮಹಾದೇವಿಗೆ ಮಂಗಳಾರತಿ ಮಾಡೋಣ ||1||

ಎಡೆಯೊಂದು ಮುಂದಿಡಬೇಕು
ಬಾರೇ ಅಕ್ಕಮಹಾದೇವಿಗೆ ಮಂಗಳಾರತಿ ಮಾಡೋಣ ||2||

ಜೋ ಎರೆಡು ಟೆಂಗ ಮುಂದಿಡಬೇಕು
ಬಾರೇ ಅಕ್ಕಮಹಾದೇವಿಗೆ ಮಂಗಳಾರತಿ ಮಾಡೋಣ ||3||

ಕರ್ಪೂರದಾರುತಿ ಬೆಳಗಿರಬೇಕ
ಬಾರೇ ಅಕ್ಕಮಹಾದೇವಿಗೆ ಮಂಗಳಾರತಿ ಮಾಡೋಣ ||4||

4)ಮಹಾದೇವಿಗಾರುತಿ ಬೆಳಗುವ ಬಾರೆ
ಬೆಳಗುವ ಬಾರೆ ಭಾರತಮಾತೆಗೆ ||ಪ||

ದುಷ್ಟ ಮಹಿಷಾಸುರನ ಹೊಟ್ಟೆಯ ಸೀಳಿ
ದುರ್ಗಿ ಅವತಾರ ತಾಳಿದ ತಾಯಿಗೆ ||1||

ಚಂಡ ಮುಂಡರ ರುಂಡವ ಕಡಿದು
ಚಂಡಿ ಅವತಾರ ತಾಳಿದ ತಾಯಿಗೆ ||2||

ರಕ್ತಬೀಜನ ರಕ್ತವ ಕೂಡಿದು
ಶಕ್ತಿ ಅವತಾರ ತಾಳಿದ ತಾಯಿಗೆ ||3||

5)ಮಹಾದೇವಿಗೆ ಆರುತಿ ಬೆಳಗುವ ಬಾರೇ
ಭಾರತಮಾತೆಗೆ ಆರುತಿ ಬೆಳಗುವ ಬಾರೇ ॥ಪ॥

ಹುಕ್ಕ ಬುಕ್ಕರನ್ನೆಲ್ಲಾ ಸೊಕ್ಕವ ಮುರಿಸೆ
ಕಾಳಿಯ ಅವತಾರವ ತಾಳಿದಾಕಿ ||1||

ಶುಂಬ ನಿಶುಂಬರಾಲ್ಲಾ ಕೊಂಬವ ಮುರಿಸಿ
ಶಾಂಭವಿ ಅವತಾರವ ತಾಳಿದಾಕಿ ||2||

ಚಂಡ ಮುಂಡ ರುಂಡವ ಹಾರಿಸಿ
ಚಾಮುಂಡಿ ಅವತಾರ ತಾಳಿದಾಕಿ ||3||

ಧರೆಯೊಳು ನಾಗನಾಳ ಪುರದೊಳು ಮೆರೆಯುವ
ಚಿದಾನಂದ ಅವತಾರವ ತಾಳಿದಾಕಿ ||4||

ಕೌಶಿಕನ ಶಿರಹರಿದು ನಾಶ ಮಾಡಿದಾಕೆ
ದಿಗಂಬರೆ ರೂಪ ತೋರಿದ ಅಕ್ಕಗೆ ||5||

ಕಲ್ಯಾಣಪುರದಲಿ ಅಲ್ಲಮಪ್ರಭುದೇವರ
ಚೆನ್ನಮಲ್ಲಿಕಾರ್ಜುನನಾ ನೀನೆ ಗತಿ ಎಂದು
ಕದಳಿವನದಲಿ ವಾಸ ಮಾಡಿದ ಅಕ್ಕಗೆ ||6||

6) ಮಂಗಲ ಮಾಡುವೆ ಶ್ರೀ ಮಹಾದೇವಿಗೆ
ಮಂಗಲ ಮಾಡುವ ಶ್ರೀ ಮಹಾದೇವಿಗೆ
ಮಹಾಶಿವಶರಣೆಗೆ ॥ಪ॥

ಉಡುತಡಿ ಪಟ್ಟಣದೊಳು ಉದಯಿಸಿದೆ
ದೊರೆ ಕೌಶಿಕನ ಮದ ಮುರಿಯಿಸಿದೆ ||1||

ಭಾರತಮಾತೆಯ ಮಕ್ಕಳು ನಾವು
ಭಕ್ತಿಯ ಬೇಡುವೆ ನಿಮ್ಮೊಳು ನಾವು ||2||

ಕನ್ನಡ ನಾಡಿನ ಕಣ್ಮಣಿ ನೀನು
ಕನ್ನಡ ಬಳಗಕೆ ಉನ್ನತ ಮಹಿಳೆ ನೀನು ||3||

## ಅಕ್ಕನ ಆತ್ಮಜ್ಯೋತಿ ಗೀತೆ :

ಆತ್ಮಜ್ಯೋತಿ ಅರಳಿ ನೀತಿ ತಮ್ಮ ನುಡಿದ
ತಾಯಿಯೇ ಅಕ್ಕಮಹಾದೇವಿಯೇ ||ಪ||

ಯೋಗ ತ್ಯಾಗ ನಿನ್ನ ಮಾರ್ಗ
ಮುಂದು ಮುಂದೆ ಸಾಗಿದೆ ||1||

ಕವನ ಹಾಡಿ ಶಿವನ ಕೂಡಿ
ಭುವನವನ್ನು ಬೆಳಗಿದೆ ||2||

ಧನ್ಯ ಶರಣೆ ನಿನ್ನ ದೇವ
ಚೆನ್ನಮಲ್ಲಿಕಾರ್ಜುನ ಚೆನ್ನಮಲ್ಲಿಕಾರ್ಜುನ ||3||

ಆತ್ಮಸಾಕ್ಷಾತ್ಕಾರ ಪಡೆದ ಶರಣೆಯೇ
ಅಕ್ಕಮಹಾದೇವಿಯೇ ಅಕ್ಕಮಹಾದೇವಿಯೇ ||4

## ಅಕ್ಕನ ಜೋಗುಳ ಹಾಡು :

1)ಜೋ ಜೋಯೆನ್ನ ಜ್ಯೋತಿಯ ಕಂದ ಜೋ ಜೋ
ಜೋ ಎನ್ನ ಪ್ರೀತಿಯ ಕಂದಾ ಜೋ ಜೋ ॥ಪ॥

ತ್ರೇತಾಯುಗದಲಿ ಜಾನಕಿಯಾದೆ
ದ್ವಾಪರಯುಗದಲಿ ದ್ರೌಪದಿಯಾದೆ
ಕಲಿಯುಗದಲಿ ರೇಣುಕಿಯಾದೆ
ಈಗ ಅಕ್ಕಮಹಾದೇವಿಯೆಂದಿನಿಸಿದೆ ಜೋ ಜೋ ||1||

ಆದಿಶಕ್ತಿಯು ನೀನು ಪಾರ್ವತಿಯಾದೆ
ಕೈಲಾಸ ಶಂಕರನ ಮಡದಿಯಾದೆ
ಚಾಮುಂಡಿಯ ರೂಪವ ತಾಳಿ ಮಹಿಷನ ಕೊಂದೆ
ಈಗ ಅಕ್ಕಮಹಾದೇವಿ ರೂಪವ ನೀ ಹೊಂದಿದೆ ಜೋ ಜೋ ||2||

ನಿರ್ಮಲನು ತಂದೆ ಸುಮತಿಯು ತಾಯಿ
ಅವರ ಗುಣಗಳಿಗೆ ಒಲಿದ ಉದರೊಳು
ಅಕ್ಕಮಹಾದೇವಿಯೆಂಬ ಹೆಸರನು ತೊಟ್ಟಿ
ಕೂಡಿರುವ ಜನಕೆಲ್ಲ ಆನಂದವ ಕೊಟ್ಟೆ ಜೋ ಜೋ ||3||

2)ಜೋ ಜೋ ಜೋ ಜೋ ಅಕ್ಕಮಹಾದೇವಿ
ಜೋ ಜೋ ಅಕ್ಕಮಹಾದೇವಿ ಜೋ ।।ಪ।

ತಾಯಿಮಡಿಲ ತುಂಬಿ ಬಂದ ಮನಕೆ
ಆನಂದ ತಂದ ಆನಂದ ಕಂದಾ ಜೋ ಜೋ ||1||

ಬಂಗಾರ ವರ್ಣ ಶೃಂಗಾರ ತಾಣ
ಉಡುತಡಿ ಗ್ರಾಮದಲಿ ಜನಿಸಿದೆಯಮ್ಮ ||2||

ಆಚಾರವಂತೆ ನೀನಾದೆ ಪುನೀತೆ
ಶರಣ ಸಂಕುಲಕೆಲ್ಲ ಅಕ್ಕ ನೀನಾದೆ ||3||

ಶರಣರ ಪ್ರೇಮಿ ಶರಣಿ ಸುಜ್ಞಾನಿ
ಶರಣೆಂದು ಬಂದಂಥ ಕರುಣಿ ಕಲ್ಯಾಣಿ ||4||

3) ಜೋ ಜೋ ಶರಣಸತಿಯರು ಕೂಡಿ
ಜೋ ಎಂದು ಪಾಡಿರಿ ನಲಿನಲಿದಾಡಿ
ಅಕ್ಕಮಹಾದೇವಿಯ ಹೆಸರು ಕೊಂಡಾಡಿ
ಹಿಂಗ ಜೋ ಎಂದು ಕೂಗಿರಿ ಅಕ್ಕಮಹಾದೇವಿಯ ಜೋ ಜೋ ।।ಪ।।

ಬಾ ತಾಯಿ ಮಹಾದೇವಿ ಇಳಿದು ಬಾ ತಾಯಿ
ಅಕ್ಕ ನೀನಾದೆ ಜಗಕೆಲ್ಲಾ ತಾಯಿ
ಸಕ್ಕರೆಯ ಸವಿಯಾಗಿ ಸವಿಜೇನು ನೀನಾದೆ
ಹಿಂಗ ನೀನಾದೆ ಎದೆಯ ಹಾಲು ಮಕ್ಕಳಿಗೆ ಜೋ ಜೋ ||1||

ಆಶ್ರಯನಿನಗಿತ್ತು ಶರಣರಲ್ಲಿ
ಭೂಕೈಲಾಸವೆನಿಸಿತ್ತು ಕಲ್ಯಾಣದ ನೆರಳಲ್ಲಿ
ಶರಣ ಬಳಗವು ಇದ್ದು ಕಾಯಕದ ನೆಲೆಯಲ್ಲಿ
ಹಿಂಗ ನೆರಳಲ್ಲಿ ಹಬ್ಬಿತ್ತು ತುಂಬೆಲ್ಲಾ ಜೋ ಜೋ ||2||

ಹೂವಿನಹಿಪ್ಪರಗಿ ಗ್ರಾಮದಲಿ ಇಂದು
ನಿನ್ನ ಪತಿ ಮಲ್ಲಿಕಾರ್ಜುನ ನೆಲೆಸಿಹನಿಲ್ಲಿ
ಬಾ ತಾಯಿ ಕದಳಿಯ ಬನಬಿಟ್ಟು ಇಲ್ಲಿ
ಹಿಂಗ ಜೋ ಎಂದು ಕೂಗುವೆವು ಅಕ್ಕಮಹಾದೇವಿಯ ಜೋ ಜೋ ||3||

4)ಜೋ ಜೋ ಎಂದು ಜೋಗುಳ ಹಾಡಿ
ಅಕ್ಕಮಹಾದೇವಿ ಎನ್ನುವೆ, ತಾಯಿ ಮಹಾದೇವಿ ಎನ್ನುವೆ ||ಪ||

ಸುಮತಿ ನಿರ್ಮಲರ ಪ್ರೀತಿಯ ಕಂದ
ವೈರಾಗ್ಯ ಮೂರುತಿ ನೀನಾದೆ ಅಕ್ಕ ||1||

ಅಂದ ಚೆಂದ ತೊಟ್ಟಿಲು ಬಂಧ
ಎಷ್ಟಂತ ಶೃಂಗಾರವು ನಿನಗೆ ||2||

ಅನುಭವ ಮಂಟಪದೊಳು ನೀನು
ವಚನ ಸುಧೆಯನು ಸುರಿಸಿದೆ ತಾಯಿ ||3||

ಪರಶಿವನ ಮಡದಿ ತೂಗುವೆ ಮನದಿ
ಮಲ್ಲಿಕಾರ್ಜುನನ ಸತಿಯು ನೀನಾದೆ ||4||

ಉಡುತಡಿಯೊಳು ಹುಟ್ಟಿನೀನು
ಕದಳಿಯೊಳು ಐಕ್ಯವಾದ ತಾಯಿ ||5||

5) ಜೋ ಜೋ ಅಕ್ಕಮಹಾದೇವಿ ತಾಯಿ ಜೋ ಜೋ ।।ಪ।।
ಪಾರ್ವತಿ ದೇವಿಯ ಸಾತ್ವಿಕ ಕಳೆಯೆ
ಹರಗುರು ಶರಣರು ಭಕ್ತಿಯ ಸೆಲೆಯೆ
ವರಚನ್ನಮಲ್ಲೇಶ ಮೆಚ್ಚಿದ ಸತಿಯ ಹಿಂಗ
ಜೋ ಯೆಂದು ಹಾಡುವೆ ವೈರಾಗ್ಯ ನಿಧಿಯೇ ಜೋ ಜೋ ||1||

ಉಡುತಡಿ ಗ್ರಾಮದ ಸುಮತಿ ನಿರ್ಮಲ
ಉದರದಿ ಅರಳಿದ ಸುಂದರ ಕಮಲ
ಮಹಾದೇವಿ ಹೆಸರಿಟ್ಟು ಕರೆದರು ಸರಳ ಹಿಂಗ
ನೆರೆಹೊರೆಯವರಿಗೆ ಮಣಿ ಮುತ್ತು ಹವಳ ಜೋ ಜೋ ||2||

ಹದಿನಾರು ಹರೆಯಕ್ಕೆ ಕಾಲಿಡುವಾಗ
ಬಂಗಾರಕಳೆ ತುಂಬಿ ಮುಖದಿ ಶಿವರಾಗ
ಚೆಲುವ ಶಿವ ಮೈ ಬೆಳಗು ಭಸ್ಮ ಹಣಿಯಾಗ ಹಿಂಗ
ಮುಂತಾದ ಕಲೆಯನ್ನು ಹೇಳುವ ನಿಂಗ ಜೋ ಜೋ ||3||

ಕೌಶಿಕ ರಾಜನ ಮೆರವಣಿಗೆ ಬಂತು
ಮಹಾದೇವಿ ನೋಡುತ್ತಾ ಬಾಗಿಲದಿ ನಿಂತು
ಅವಳ ನೋಡಿದ ರಾಜ ಮನಕೆಟ್ಟು ಕುಂತು ಹಿಂಗ
ಹೊರಟಳು ನೆಲೆಬಿಟ್ಟು ಶಿವನ ಹುಡುಕುತ ಜೋ ಜೋ ||4||

ಕಲ್ಯಾಣ ಶರಣರ ಬಳಗವ ಸೇರಿ
ಮಲ್ಲಿಕಾರ್ಜುನನೇ ಪತಿಯೆಂದು ಸಾರಿ
ಶ್ರೀ ಶೈಲ ಕದಳಿಯ ಪೊಕ್ಕು ಶಿವಗೌರಿ ಹಿಂಗ
ಬೆಳಕಾಗಿ ಹೋದಳು ಕಾಮಸಂಹಾರಿ ಜೋ ಜೋ ||5||

ಶರಣಸಂತರ ನೆಲೆಯು ಪುರ ತಾಳಿಕೋಟಿ
ಗಚ್ಚಿನಮಠವಿರುವ ಕೈಲಾಸ ಪ್ಯಾಟಿ
ವರಚೆನ್ನ ಶರಣರ ಶಿವಭಕ್ತಿ ಘಟ್ಟ। ಹಿಂಗ
ಹಾಡುವೆ ನಮಿಸುತ್ತ ಅನಂತ ಕೋಟಿ ಜೋ ಜೋ ||6||

## ಅಕ್ಕನ ಸಾಹಸ ಗೀತೆ :

ಬಾರೇ ತಾಯಮ್ಮ ಬಾರೇ ಅಕ್ಕಮಹಾದೇವಿ ಬಾರೇ
ಉದುತಡಿಯ ಅಕ್ಕಮಹಾದೇವಿ ಬಾರೇ ।।ಪ।।

ತಂದೆ ನಿರ್ಮಲಶೆಟ್ಟಿ ತಾಯಿ ಸುಮತಿನ
ಹೊಟ್ಟೆಯಲ್ಲಿ ಹುಟ್ಟಿ ಮಮತೆಯಿಂದಲೇ
ನಿನಗೆ ಅಕ್ಕಮಹಾದೇವಿ ಎಂದು ||1||

ಹುಟ್ಟಿದ ಒಂಭತ್ತು ವರುಷಾಗಲು
ಇಷ್ಟಲಿಂಗದಿ ಮನವ ಇಷ್ಟಲಿಂಗವೇ
ಎನಗೆ ಜೀವದ ಪತಿಯಾಗಬೇಕೆಂದು ||2||

ರೂಪವನ್ನೇ ನೋಡಿ ನಿನ್ನ ಭೂಪ ಕೌಶಿಕ
ಕರೆದ ಮೋಹಿಸಿ ನಿನ್ನ ಮೇಲೆ
ಸುಟ್ಟ ಭಸ್ಮವೇ ಆದೆ ||3||

ಶರಣರ ಸತಿಯಂದು ನೀನು ಲಿಂಗವೇ
ಪತಿಯೆಂದು ಬೋಧಿಸಲು ಶರಣ
ಸಂತತಿಯವರೇ ನಿನಗೆ ಶಿರಬಾಗಿ ಕೈ ಮುಗಿದು ||4||

ಶ್ರೀಶೈಲಗಿರಿಯನೇರಿ ಆದ ಮಲ್ಲಿಕಾರ್ಜುನ ಕರೆದು
ಮಲ್ಲಿಕಾರ್ಜುನ ಎನಗೆ ಜೀವದ
ಪತಿಯಾಗಬೇಕೆಂದು ||5||

ಶರಣ ಮಹಾದೇವರ ತಂಗೀ ಬಾರೇ
ಗ್ರಾಮ ಬಬಲೇಶ್ವರದೊಳಗೆ
ಮತ್ತೊಮ್ಮೆ ಜನ್ಮವ ತಾಳಿ ಬಾರೆ ||6||

## ಅಕ್ಕನ ಭಕ್ತಿಗೀತೆ :

ಅಕ್ಕಗೊಲಿದಾ ಮಹಾದೇವಿಗೊಲಿದಾ ನಮ್ಮ
ಮಲ್ಲಿಕಾರ್ಜುನದೇವಾ ಚನ್ನಮಲ್ಲಿಕಾರ್ಜುನ ದೇವಾ ॥ಪ॥

ಭಕ್ತಿ ತವರು ತಾಯಿ ನಮ್ಮ ಮಹಾದೇವಿ
ಶಕ್ತಿ ಸ್ವರೂಪ ಈ ದೇವಿಗೆ ಒಲಿದಾ ಅಕ್ಕಗೊಲಿದಾ ||1||

ಕನ್ನಡಮ್ಮನ ಹಿರಿಮೆ ಭಾರತಾಂಬೆಯ ಹೆಮ್ಮೆ
ಮಾನವ ಕುಲದಾ ಈ ಮಲ್ಲಗೊಲಿದಾ ಅಕ್ಕಗೊಲಿದಾ ||2||

ರಾಜಸಂಪತ್ತು ಬಿಟ್ಟು ಕಾಮವಾಸನೆ ಸುಟ್ಟು
ಕೌಶಿಕ ರಾಜಗೆ ಒಲಿಯದ ರಾಣಿಗೆ ಅಕ್ಕಗೊಲಿದಾ ||3||

ಬಹಳ ಸೌಖ್ಯವ ಮರೆದು ಜೀವದಾಸೆಯ ತೊರೆದು
ಬಾಲವಿರಾಗಿಣಿ ಆಧ್ಯಾತ್ಮದ ಕಡೆಗೆ ಅಕ್ಕಗೊಲಿದಾ ||4||

ಕೇಶ ವಸ್ತ್ರವನುಟ್ಟು ದೇಶ ತಿರುಗಿದ ಮಾನಿನಿ
ಕದಳಿಯ ವನದೊಳು ನೆಲೆಸಿದ ಗರತಿಗೆ ಅಕ್ಕಗೊಲಿದಾ ||5||

ಭಕ್ತಿಗೊಲಿದಾ ಅವರ ಭಾವಕ್ಕೊಲಿದಾ ನಮ್ಮ
ಮಲ್ಲಿಕಾರ್ಜುನದೇವಾ ಚೆನ್ನಮಲ್ಲಿಕಾರ್ಜುನ ದೇವಾ ||6||

## ಅಕ್ಕಮಹಾದೇವಿ ಸ್ತೋತ್ರ :

ನಮ್ಮ ನಾಡಿನಾವು ಪುಣ್ಯದಿಂದ ದೇವಿಯೇ
ಚೆನ್ನ ನೊಲಿದ ರನ್ನ ನೀನು ಮೂರು ಬೆಳಗಿದೆ
ಥಳಥಳನೆ ತೊಳಗಿದೆ ||ಪ||

ನಿನ್ನ ಧೈರ್ಯವೆಂತದಮ್ಮಾ ಸ್ಥೈರ್ಯವೆಂತದೋ
ನೀನು ನೆಚ್ಚಿ ನಿನ್ನ ಮೋಘ ಮೋಕ್ಷಯೆಂತದೋ
ಮನವೆಂಥದೋ ಮೇಲುಕೆತ್ತುವಂಥದೋ ಹೆಂಗೇಳಲಿ
ನಿನ್ನ ಸರಿ ಭಕುತಿ ಝುರಿ ಮುಕುತಿ ಸರೀ
ಇನ್ನಾರದೋ ಇನ್ನುವರೆಗೆ ತೋರದೋ ||1||

ಚೆನ್ನಮಲ್ಲಿಕಾರ್ಜುನನಿಗೆ ನೀನೆ ಕಣ್ಮಣಿ
ನೀನೆ ಶಿವಾನುಭವ ಮಂಟಪದ ಶಿಖಾಮಣಿ
ಅಸಮಾನದ ಪೆಣ್ಮಣಿ ಶಿವಸಂಸ್ಕೃತಿಯ ಖಣಿ
ನಿನ್ನ ನುಡಿ ಹೊನ್ನ ಕಿಡಿ ರಸದ ಕುಡಿ ||2||

ಹೊಸತನದೀ ಎಸೆವ ಸುಗ್ಗಿಯ ರಸಿಕತೆಯ ಭಾಗ್ಯವು
ನಿನ್ನ ವಾಣಿಯಿಂದ ನಮ್ಮ ನುಡಿಗೆ ಕಳೆಯನು ನೀಡಿ ಹರಸೆ
ಇದೇ ವಚನ ಕಾವ್ಯ ನಿಧಿಯನು ಬೆಳೆಸಿರುವ ಬೆಳೆಯನು
ಅನುಭವದ ನಿಲುವನು ವಚನದಲಿ ನುಚ್ಚು ನುಲಿ
ಕಿಚ್ಚಿನಲಿ ಮೇಳಗೊಂಡಿವೆ ಕೂಡಿ ಕೂಡಿ ಹರಿದಿವೆ ||3|

ನಿನ್ನ ಜೀವನದಲ್ಲಿ ಅರಳಿರುವ ಕಾವ್ಯವೋ ಎನಿತು
ನವನವ ಸಾಹಿತ್ಯ ನಿತ್ಯ ನವ್ಯವೇ ಅದು
ಅಮೋಘ ಕಾವ್ಯವು ಇಹುದು ಅದರ ದಿವ್ಯವು
ದೇವನಲಿ ಪ್ರೇಮದಲಿ ಚಿರಹುನಲಿ ನಲಿಯುತಲೀ
ಸುಳಿದು ಜೀವನಾ ಅದು ಅಸಾಧ್ಯ ಸಾಧನಾ ||4||

ಎಂಥ ಎಳೆಯತನದಿ ಪಂಥ ತೊಟ್ಟು ನಡೆದಿಯ ಭಕ್ತೆ
ಜ್ಞಾನ ವೈರಾಗ್ಯದ ದಾರಿ ಹಿಡಿದಿದೆ
ಗುರುನಂಬಿ ನಡೆದೀವಿ ನಿಜದೊಳಗೆ ಇಂಬು ನಡೆದು

ತೋರಿದಾ ಚನ್ನಪತಿ ನೀನೇ ಸತಿ ಶಿವನೇ ಗತೀ ಅವನೇ ಮತಿ
ಎಂದು ಸಾರಿದಾ ಅವನಳಗೊಂದು ಗೂಡಿದಾ ||5||

ಎಂಟನೂರು ವರುಷ ದಾಚೆಯಿಂದ ಈಚೆಗೆ ನಿನ್ನ ಕಿರಣ ಕೀರ್ತಿ
ಪಥವ ತೋರಿ ಬಂದರೆ ತೆರೆತೆರೆಯನೊಂದಿಗೆ
ಕವತುಕವ ತಂದಿದೇ ಮರಳಿ ಅದೇ ರೂಪವನು ತಾಳಿದೆ
ಜ್ಯೋತಿಯನು ಬೀರಲಾರೆಯಾ ಪಥವಾ ತೋರಲಾರೆಯಾ ||6||

## ಅಕ್ಕನ ಸ್ತುತಿಗೀತೆ :

1)ಭಕ್ತಿ ಶಿರೋಮಣಿ ಮಹಾಶಿವಶರಣೆ ಶರಣು ಮಹಾದೇವಿ
ಮುಕ್ತ ಕಂಠದಿಂದಾ ಎಷ್ಟೊಂದು ಹೊಗಳಲಿ ಅಕ್ಕಮಹಾದೇವಿ ।।ಪ।।

ಕನ್ನಡನಾಡಿನ ಉಡುತಡಿಗ್ರಾಮದಿ ಈಶನ ಕೃಪೆಯಿಂದ
ತಂದೆ ನಿರ್ಮಲಶೆಟ್ಟಿ ತಾಯಿ ಸುಮತಿದೇವಿಯಲ್ಲಿ ಜನಿಸಿ ಬಂದಿ ||1||

ಸುಂದರ ಅಂಗಕೆ ಶೃಂಗಾರ ಮಾಡದೇ ಲಿಂಗವೇ ಪತಿ ಎಂದಿ
ಸಾವಗೆಡುವ ಗಂಡಂದಿರ ನೊಯ್ದು ಒಲಿಯೊಳಗಾಕಂದೀ ||2||

ನಿನ್ನಯ ಅಂಗದ ಅಂದವ ಕಂಡು ನೀಚ ಕೌಶಿಕರಾಜ
ನಿನ್ನನು ಒಲಿಸಲು ತನ್ಮಯನಾದನು ಮೂರ್ಖ ಕೀಚಕನಂತೆ ||3||

ನೊಂದ ಮನಸಿನಿಂದ ಕೌಶಿಕನ ಪಾಶವ ಹರಿದೊಗದೆ ಧೀರೆ
ಮಲ್ಲಿಕಾರ್ಜುನನೇ ಗಂಡನು ಎಂದು ಹೊರಟೆ ಮಹಾವೀರ ||4||

ವೀರ ವಿರಾಗಿಣಿ ಮಹಿಳೆ ಕಲ್ಯಾಣಿ ಗುರು ಪ್ರಭುದೇವರ
ವರವನು ಪಡೆಯಲು ಕಲ್ಯಾಣಕೆ ಹೊರಟ ನಾರಿ ಶಿರೋಮಣಿಯೇ ||5||

ಅನುಭವ ಮಂಟಪದ ಅಧ್ಯಾತ್ಮ ವಿಷಯದ ಅರಿತು ಮಾತನಾಡಿ
ಅಲ್ಲಮ ಪ್ರಭುಗಳು ಹೌದು ಹೌದೆನ್ನುವಂತೆ ತಲೆದೂಗಿಸಿಬಿಟ್ಟೆ ||6||

ಅಲ್ಲಮಪ್ರಭುಗಳು ಮುಕ್ತಿಯ ಮಾರ್ಗವ ಶ್ರೀಶೈಲದಕದಳಿ  ಕಡೆಗೆ
ತೋರಿಸಿದಾಗಲೇ ಕೊನೆಯಲಿ ಮುಕ್ತಿಗಾಗಿ ಮಲ್ಲಿಕಾರ್ಜುನ ಕಡೆಗೆ ||7||

ಧಾವಿಸಿ ಬಂದು ಧ್ಯಾನಿಸುತಲಿ ಸೇರಿ ಮಾಯವಾದೆ
ಶ್ರೀಶೈಲಧೀಶನ ಸಾನಿಧ್ಯದಲ್ಲಿ ಸೇರಿ ಐಕ್ಯವಾದೆ ||8||

2)ಅಕ್ಕನದಿನವಿದು ಅಹುದೇನೆ ಇಲ್ಲಿ
ಆಕೆಯು ಬಂದಿರಬಹುದೇನೇ ಇಲ್ಲಿ ||ಪ||

ಅಕ್ಕನು ಎಂಥಾ ಚಿಕ್ಕವಳೇ ಮುಕ್ತಿಯ ಪಡೆದವಳೇ
ಹೇಳೆ ತನ್ನಯ ಸನಿಹ ಬಂದೀಹಳೇ
ಉನ್ನತ ಮೋಕ್ಷ ಕೊಟ್ಟವಳೇ
ತನ್ನಯ ಬಳಗದ ಭಕ್ತಿಯನು ಕನ್ನಡ ನಾಡಿನ ಶಕ್ತಿಯನು ||1||

ಅಕ್ಕನ ಕುಲದಲಿ ಉದಯಿಸಲು
ಎಷ್ಟಪುದು ಶೋಭಿಸಲು
ಅಕ್ಕನ ಹುಡುಕಲು ನಡೆಬೇಗ
ಮುಕ್ತಿಯ ಪಡೆಯುವೆ ನಾನೀಗ ||2||

3)ಹುತ್ತಿನಲ್ಲಿ ಸರ್ಪವ ಕಂಡು
ಮುತ್ತಿನಂಥ ಹೆಡೆಯ ತೆಗೆದು
ಪರಸುಖವು ಘನವು ತೋರೆ ಅಕ್ಕಮಹಾದೇವಿ ಬಾರೆ ||ಪ||

ಹನ್ನೆರಡು ವರುಷದಾಕಿ ತಾಯಿ ತಂದೆ ಆಜ್ಞೆ ಮೀರಿ
ಅಡವಿ ಸಂಚರಾದೆ ಮಹಾದೇವಿ ಅಕ್ಕ ಬಾರೇ ||1||

ಸಂಪತ್ತ ಗುಡ್ಡಕ ಹೋಗಿ ಕಾಡಾಪತ್ರಿಯ ಸೇರಿ
ಹುಲಿಕರಡಿಗೆ ಅಂಜಳಾಕಿ ಮಹಾದೇವಿಯಕ್ಕ ಬಾರೆ ||2||

ಹಣೆಯ ಮೇಲೆ ವಿಭೂತಿ ಧರಿಸಿ
ಕೊರಳಲ್ಲಿ ರುದ್ರಾಕ್ಷಿ ಹಾಕಿ ಶಿವಶರಣೆಯಾದಳಾಕೆ ||3||

ಪಾತಾಳಗಂಗಿಗೆ ಹೋಗಿ ಪ್ರೀತಿಯಲಿ ಸೀತಾಳ ತುಂಬಿ
ಶಿವಪೂಜೆ ಮಾಡಾಳಾಕಿ ಮಹಾದೇವಿಯಕ್ಕ ಬಾರೇ ||4||

ಶ್ರೀಶೈಲಗಿರಿಗೆ ಹೋಗಿ ಮಲ್ಲಿಕಾರ್ಜುನನ ಭೇಟಿಯಾಗಿ
ಅಲ್ಲಿ ಐಕ್ಯಳಾದಾಕಿ ಮಹಾದೇವಿಯಕ್ಕ ಬಾರೆ ||5||

4)ಕೇಳಿರಿ ಶರಣೆಯರೇ ವೀರಮಾತೆಯರೆ
ಎಂತಹ ಶರಣರು ದರುಶನಕಾರರು ॥ಪ॥

ಅನುಭವ ಮಂಟಪಕೆ ಅನುವ ಮಾಡಿದರಲ್ಲಿ
ಅನುಭವದಿಂದ ಅವರು ಇನ್ನೊಮ್ಮೆ ಬಂದು ಹೋಗುವರು||1||

ಕಲ್ಯಾಣಪುರದೊಳು ಕುಲಬಿಟ್ಟ ಶರಣರು ಕೂಡಿ
ಕ್ಷುಲ್ಲಕ ಗುಣಗಳನ್ನು ಬಿಟ್ಟು ಕುಶಲದಿಂದ ಇರುವರು ||2||

ಅಕ್ಕಮಹಾದೇವಿಯನ್ನು ಅಕ್ಕರೆಯಿಂದ ಕರೆತಂದು
ಹಿರಿಯರೆಲ್ಲರು ಕೂಡಿ ಚೊಕ್ಕ ಗುಣವನು ಪಾಡಿ ||3||

ಧರೆಯೊಳು ನಾಗನಾಳ ಪುರದೊಳು ಮೆರೆಯುವ
ಶ್ರೀ ರೇವಣ ಸಿದ್ದೇಶ್ವರ ಸಂತಸ ಸದನದ ಬೀಡು ||4||

5) ಶರಣೆ ಬಾರಮ್ಮಾ ಮನೆಗೆ ಶರಣೆ ಬಾರಮ್ಮಾ
ಶರಣೆ ಬಾರಮ್ಮಾ ಮನೆಗೆ ನಾ ನಿನ್ನ ಕರೆಯಲು ಬಂದೆ ||ಪ||

ವೀರಶೈವ ಮತದಲಿ ಹುಟ್ಟಿ ಹಣೆಯಲ್ಲಿ
ವಿಭೂತಿ ಗಟ್ಟಿ ಕೊರಳೊಳು ರುದ್ರಾಕ್ಷಿ ಕಟ್ಟಿ
ನಾರಿಕುಲಕೆ ತಿಲಕವನ್ನಿಟ್ಟು ಶರಣೆ ಬಾರಮ್ಮಾ ||1||

ಆಸೆವೆಸನವೆಲ್ಲವ ಸುಟ್ಟಿ ಕೌಶಿಕನ ಸೋಲಿಸಿ ಬಿಟ್ಟಿ
ಈಶನಲಿ ಭಕ್ತಿ ಇಟ್ಟಿ ಆಸೆ ವ್ಯಸನವೆಲ್ಲವ ತೊರೆದು
ಹೊಂಟ ಶರಣೆ ಬಾರಮ್ಮಾ ||2||

ತಾಯಿತಂದೆಗಳು ಎಲ್ಲರನು ನೀ ಬಿಟ್ಟಿ
ಪಾದತನಕ ಜಡಿಯನು ಉಟ್ಟಿ ಕಲ್ಯಾಣ
ಹುಡುಕುತ ಹೊಂಟಿ ಅಲ್ಲಿ ಶರಣರಾದರು ಬೆಟ್ಟಿ ಶರಣೆ ಬಾರಮ್ಮಾ ||3||

ಗಂಗೆಯೊಳು ಸ್ನಾನವ ಮಾಡಿ ಶಿವಲಿಂಗಕ್ಕೆ
ಮಂಗಳ ಪಾಡಿ ಚೆನ್ನಮಲ್ಲಿಕಾರ್ಜುನನಿಗೆ
ನಿನ್ನ ಪ್ರಾಣ ಅರ್ಪಣೆ ಮಾಡಿದ ಶರಣು ಬಾರಮ್ಮಾ ||4||

6)ದಿಗಂಬರಾಗಿ ಹೊಂಟಾಳ ಮಹಾದೇವಿ ಕಲ್ಯಾಣ ಊರಿಗೆ
ಶಿವಶರಣರ ಬೆಟ್ಟಿಗೆ ಸುದ್ದಿ ಹತ್ತಿತು ತಾಯಿ ತಂದೆಗೆ ||ಪ||

ಸೀರಿ ತಂದಾರ ಮಗಳಿಗೆ ಕುಬಸ ತಂದಾರ ಮಗಳಿಗೆ
ಉಟಕೋ ಅಂತಾರ ಮಹಾದೇವಿಗೆ ಇದ್ದದ್ದು ಬಟ್ಟೆ
ಖಾಯಂ ಇರಲಿ ಕಲ್ಯಾಣ ಊರಿಗೆ ||1||

ಪ್ರಭು ದೇವರ ಹೇಳತಾರ ಶಿಷ್ಯರಿಗೆ ಒಬ್ಬಾಕೆ
ಹೆಣ್ಣು ಮಗಳು ಹೊಂಟಾಳ ಆಕೆಯ ಪತಿಯ ಹೆಸರು
ಕೇಳರೀಗ ಕಲ್ಯಾಣ ಊರಿಗ ||2||

ಎನ್ನ ಪತಿ ರಾಜಯೋಗಿ ಹುಟ್ಟುವನಲ್ಲ
ಸಾಯುವನಲ್ಲ ನಿರಂತರ ಶಿವಯೋಗಿ
ಚೆನ್ನಮಲ್ಲಿಕಾರ್ಜುನೀಗ ಕಲ್ಯಾಣ ಊರಿಗ ||3||

ಐದು ಮುತ್ತೈದೆಯರು ಕೂಡಿ ಮಾಡತಾರ

ಮಹಾದೇವಿಗಿಂದು ಪೂಜೆ ಪೂಜೆಯ ಮಾಡಿ
ಮುಕ್ತಿಯ ಪಡಿತಾರ ಕಲ್ಯಾಣ ಊರಿಗ ||4||

7) ನವಿಲೊಂದು ನಟಿಸಿತು ನವಲಾಳದಲಿ
ಅನುಭವ ಮಂಟಪದ ಅಂಗಳದಿ ॥ಪ॥

ಸುಮತಿ ನಿರ್ಮಲರ ಉಡಿಯಿಂದ ಜಾರಿ
ಉಡುತಡಿಯರಸನ ಆಸೆಯ ಮೀರಿ
ದೇಹದ ಮೋಹವ ಮನದಿಂದ ತೂರಿ
ಕಲ್ಯಾಣ ಶರಣರ ಬಳಗವ ಸೇರಿ ||1||

ಮನೆಮನೆ ತಪ್ಪದೆ ಕೈಯೊಡ್ಡಿ ಬೇಡಿ
ಬೇಡಿದೊಡೆಯ ಯಾರು ನೀಡದಂತೆ ಮಾಡಿ
ಕಾಡೆಂದು ನುಡಿಯುತ ಶಿವಭಾವಗೂಡಿ
ವೀರ-ವೀರಾಗಿಣಿ ಗೀತೆಯ ಹಾಡಿ ||2||

ಮಲ್ಲಿಕಾರ್ಜುನನೆ ಪತಿಯೆನಗೆಂದು
ಆತನೇ ನಲ್ಲನೆಂದು ತೋರಿದೆ ಬಂದು
ಗಿಳಿಕೋಗಿಲೆಗಳ ಬಳಿಯಲಿ ನಿಂದು
ಶರಣರ ಪದ ಜಾಲದೊಳು ಮಿಂದು ||3||

8)ಜಯಮಹಾದೇವಿ ಜಯಗುರುದೇವಿ
ಜಯ ಜಗದಕ್ಕ ನಮೋ ನಮೋ ।ಪ।।

ಶರಣ ಸತಿಯು ಲಿಂಗವೇ ಪತಿಯು
ಎಂಬ ನುಡಿಯನು ಸಾರಿದೆ
ಉಡುತಡಿ ಗ್ರಾಮದೀ ಜನಿಸಿದೆ
ದೇವನ ಆಸೆಗೆ ನಿಲುಕಿದೇ ||1||

ಗೆಳತಿಯರೊಡನೆ ಆಡುತ ನಲಿಯುತ
ಹರುಷದಿ ಬಾಲ್ಯವ ಕಳೆದಿ
ಯುವ್ವನ ಕಳೆಯ ತುಂಬಿ ತುಳುಕಿದೇ
ಜಯಮಹಾದೇವಿಗೆ ನಮೋ ನಮೋ ||2||

ಸಡಗರದಿಂದಲೀ ಮೆರೆಯುವ ಅರಸ ಅಕ್ಕನ ರೂಪ ಕಂಡಾ
ಹರುಷದಿ ತಿರುಗಿದ ಅವ ಅರಮನಿಗೆ
ಮೋಹದ ಬಲೆಗೆ ಬಿದ್ದು ಕಳುಹಿದನರಸಾ ರಾಜದೂತರ
ಅಕ್ಕನ ಮನೆಗೆ ನಮೋ ನಮೋ ||3||

ಅಕ್ಕನೆ ಬಂದಳು ಅರಮನೆಗೆ ಕೌಶಿಕ ನಿಂತ ಕೌತುಕದಿ
ಅಕ್ಕದೇವಿಯ ಕರೆದನು ಕೌಶಿಕ ಬಳಗೆ
ಅಕ್ಕನು ನಿಂತಳು ಮೈದಾಳಿ ಮಂದಾಂದಕಾರಿ ಕೌಶಿಕ ಬೆದರಿದ
ನಿರ್ಮಲ ಜ್ಯೋತಿಗೆ ನಮೋ ನಮೋ ||4||

ಉಡಿಗೆಯ ತೊರೆದು ಕಾಮವ ತೊರೆದು
ಸಂಸಾರವನೇ ತ್ಯಜಿಸಿ
ನಿರ್ಮಲ ಸುಮತಿಯ ತಾಯ್ತನ ತೊರೆದು
ಕರುಣಿಯ ಚೆನ್ನಮಲ್ಲಿಕಾರ್ಜುನೇ ಇನಿಯ ನಮೋ ||5||

ಅನುಭಾವಿಗಳ ಅಮೃತ ಸವಿಯಲು ಕಲ್ಯಾಣಕೆ ಪೋದೆ
ಶಿವಶರಣೆಯರ ಸ್ನೇಹವ ಮಾಡಿ ಕಾಮದ ಕತ್ತಲೆ
ಕಳದೋ ನಶ್ವರ ದೇಹ ಇದು ಸ್ಥಿರವಲ್ಲ
ಎಂಬುವ ನುಡಿಯನುಸಾರಿದೆ ||6||

ಶರಣಗಣ ಹಳ್ಳಿಯ ತೊರೆದು ಶ್ರೀಶೈಲಕ್ಕೆ ಪೋದಿ
ತಂಗಾಳಿ ಪಶುಗಳ ಪಕ್ಷಿಗಳೊಡನೆ ಶ್ರೀಚೆನ್ನಯ್ಯನ ನೋಡಿ
ಕದಳಿಯ ವನದಿ ಐಕ್ಯವ ಹೊಂದಿ
ಮುಕ್ತಿಯ ಪಡೆದಿ ನಮೋ ನಮೋ ||7||

ಅಕ್ಕನ ದಿವ್ಯ ಜೀವನವನ್ನು
ಮರೆವುದು ನಮಗೆ ತರವಲ್ಲಾ
ಜಗತ್ತಿಗೆಲ್ಲಾ ಹೊಳೆಯುವ ಜ್ಯೋತಿ
ಜೀವನ ಹರುಷದಿ ಹೊನಲು ||8||

ಅಕ್ಕನ ಬೆಳಗು ಎಮಗಿದು ಬೆಳಕು.
ಶಾಂತಿಯೇ ಕಾಂತಿಯೇ ನಮೋ ನಮೋ |9||

9) ಎಷ್ಟು ಕರೆಯಲಿ ನಿನ್ನಾ ಎಷ್ಟು ಹೊಗಳಲಿ ನಿನ್ನಾ
ಕರನುಳ್ಳ ಕಾಶಿಯೇ ಅಕ್ಕಮಹಾದೇವಿ ನೀನು ಬಾರೇ ॥ಪ॥

ಅಕ್ಕಮಹಾದೇವಿ ಮೊದಲಿನ ಊರು
ಉಡುತಡಿ ಎಂಬ ಸಣ್ಣ ಹಳ್ಳಿಯವರು
ಶಿವಭಕ್ತರ ಕುಲದಲಿ ಹುಟ್ಟಿ ಬಂದಿ ||1||

ತಂದೆ ಹೆಸರು ನಿರ್ಮಲಶೆಟ್ಟಿ ತಾಯಿ ಸುಮತಿನ
ಹೊಟ್ಟೇಲಿ ಹುಟ್ಟಿ ಬಂದೆ ನಿಜರೂಪವ ತೊಟ್ಟಿ
ಮುಡಿಯ ಬಿಟ್ಟು ಜಡಿಗಳ ನುಟ್ಟೆ ||2||

ನಿನ್ನ ರೂಪ ಸೂರ್ಯನ ದರ್ಪ ಎಳೆಯ ಬಿಸಿಲಿಗೆ
ಹೊಳೆಯುವ ಶರ್ಪ ಹಣೆಗಣ್ಣಗೊಂಚಲಿ
ಗಪ್ಪು ನಿನ್ನ ತುಟಿಯು ಹವಳದಂತೆ ||3||

ಮಾನ ಹೋಗಿ ಮರಣವೆ ಬರಲಿ
ಪತಿವ್ರತೆ ಸಡಗರ ಮರೆಯಲಿ ನಿಷ್ಠೆಯೊಂದ
ನಿಜವಾಗಿರಲಿ ಬೆಂಕಿಯಂಗ ಮುಟ್ಟದ್ದು ಬರಲಿ ||4||

ಕಾಡಾಪತ್ರಿ ಕುಸುಮದಿಹಾರ ಹಾರಪತ್ರಿ
ನಿನ್ನ ಕೊರಳಿಗೆ ಜನರಿಗೆ ತೋರಿದ ಬಾಲೆ
ದಾಸನಾದ ದೇಶರ ಮ್ಯಾಲೆ ||5||

ಶ್ರೀಶೈಲ ಶರಣರ ಬೆಟ್ಟಿ
ಕದಳಿಯ ಬನವ ಮಾಡಿದಿ ಮೆಟ್ಟಿ
ಬತ್ತೀದಬಾವಿ ಬಾಳೆಯ ತೋಟ ನಂಬಿದವರಿಗೆ ಆಗ್ಯಾವತಾಯಿ ||6||

ಬಾಳೆಯತೋಟದ ಬತ್ತಿದ ಭಾವಿ
ನಂಬಿದವರಿಗೆ ಆಗ್ಯಾವ ತಾಯಿ
ನಾಕಂಡ ನೀನು ತಾಯಿ ಕಂದನೆಂದ ಕಾಯುವ ತಾಯಿ ||7||

10) ಹಸಿಗೂಸ ನನ್ನ ತಾಯಿ ನನ್ನ ಅಕ್ಕ
ಮಹಾದೇವಿ ಎಲ್ಲಿ ಅಡಗಿದಾಳ ।।ಪ।

ಹಣೆಯಲಿ ವಿಭೂತಿ ಧರಿಸಿ ಕೊರಳಲ್ಲಿ
ರುದ್ರಾಕ್ಷಿ ಹಾಕಿ ಕೈಯಲ್ಲಿ ಜಪಮಣಿ ಹಿಡಿದು |1||

ಎಲ್ಲಿ ಅಡಗಿದಾಳ ತಾಯಿ
ಗಿಡದಾನ ಹಕ್ಕಿಗಳಿರಾ ವನದಾನ ||2||

ಪಕ್ಷಿಗಳಿರಾ ಕಂಡಿರೇನ್ ಅಕ್ಕಮಹಾದೇವಿನ್
ಎಲ್ಲಿ ಅಡಗಿದಾಳ ತಾಯಿ ||3||

11) ದಿಗಂಬರಾಗಿ ಹೊಂಟಾಳ ಮಹಾದೇವಿ
ಕಲ್ಯಾಣ ಊರಿಗೆ ಶಿವಶರಣರ ಬೆಟ್ಟಿಗಿ ॥ಪ॥

ಪ್ರಭುದೇವರ ಬಂದಾರ ಬಾಗಿಲಿಗೆ
ಕೈ ಜೋಡಿಸ್ಯಾರ ಮಹಾದೇವಿಗೆ
ನಿನ್ನ ಪತಿಯ ಹೆಸರೇ ಹೇಳಿಗ ಕಲ್ಯಾಣ ಊರಿಗ ||1||

ನನ್ನ ಪತಿಯು ರಾಜಯೋಗಿ
ಹುಟ್ಟುವನಲ್ಲ ಸಾಯುವವನಲ್ಲ
ನಿರಂತರ ಶಿವಯೋಗಿ ಚೆನ್ನ ಮಲ್ಲಿಕಾರ್ಜುನ ಕಲ್ಯಾಣ ಊರೀಗಿ ||2||

## ಅಕ್ಕನ ಮದುವೆಯ ಹಾಡು :

1) ಕಂಡಿರ ತಾಯಿನ ನೋಡಿರಾ
ಹರ ದಂಡಿ ಕಟ್ಟಿ ಮಡಿಕೊಂಡ ಗಂಡ ಮಲ್ಲಿಕಾರ್ಜುನ ||ಪ||

ಹಂದರಕಂಬ ಹಾಕಲಿಲ್ಲಾ ಬಂಧುಬಳಗ ಯಾರು ಇಲ್ಲಾ
ಅಂದು ನನ್ನ ಮದುವೆಯಾದ ಚೆಲುವ ಮಲ್ಲಿಕಾರ್ಜುನ ||1||

ಅರಿಶಿನ ಮೈ ತೊಳೆಯಲಿಲ್ಲಾ ಕೈಗೆ ಕಂಕಣ ಕಟ್ಟಲಿಲ್ಲಾ
ಸುರುಗಿ ಸುತ್ತಿ ಎಳೆಯಲಿಲ್ಲಾ ಕೊರಳಿಗೆ ಮಾಂಗಲ್ಯ ಮೊದಲೇ ಇಲ್ಲಾ ||2||

ಬೆಟ್ಟದ ಮೇಲೆ ಕುಳಿತಾಳಲ್ಲಿ ಬಟ್ಟೆ ಬಯಲು ಯಾರು ಇಲ್ಲಾ
ದಿಟ್ಟ ಮಲ್ಲಿಕಾರ್ಜುನನ ಪಟ್ಟದರಸಿ ಆಗ್ಯಾಳಲ್ಲಾ ||3||
ಕದಳಿಯವನಕೆ ಹೋಗ್ಯಾಳಲ್ಲಾ  ಕಂಡ್ಯಾಳಲ್ಲಾ
ಅಲ್ಲಮಪ್ರಭು ಸೊಲ್ಲ ಸೊಲ್ಲನ ನೆನೆದು ಮಲ್ಲಿಕಾರ್ಜುನ ಕಂಡಾಳಲ್ಲಾ ||4||

ಪರ್ವತಗಿರಿ ಏರ್ಯಾಳಲ್ಲಾ ತಪೋವನಕ ಇಳಿದಾಳಲ್ಲಾ
ಆತ್ಮಲಿಂಗದ ಸ್ನಾನದ ಮಾಡಿ ಜ್ಯೋರ್ತಿಲಿಂಗವ ಕೂಡ್ಯಾಳಲ್ಲಾ ||5||

## ಜನಪದ ಸಾಹಿತ್ಯದಲ್ಲಿ  ಅಕ್ಕಮಹಾದೇವಿಯವರನ್ನು ಕುರಿತು ಸಾಕಷ್ಟು ರಚನೆಗಳು ಇವೆ.

1) ಶಿವಶರಣೆ ನಿನ್ನಹಾಡು ಭವದೊಳಗೆ ಹಾಡುವುದು
ಶಿವಪದಕೆ ಮಿಗಿಲು ನಿತ್ಯದಲಿ! ಕೊನೆಯುಂಟೆ

ಶಿವಭಕ್ತಿ ಸಾರ ಗಳಿಸುದಕೆ
ಅಕ್ಕನ ನೆನೆದರ ಗಕ್ಕನೆ ಪದ ಬರಲಿ
ಅಕ್ಕವ್ವೆ ಗಂಗೆ ದಡದಲ್ಲಿ | ಸರಸೋತಿ
ಅಕ್ಕಿ ಹೂದವಳಾ | ಕರೆತನ್ನಿ.
(ಶಿವನ ಪದಕ್ಕೂ ಮಿಗಿಲು ಅಕ್ಕನನ್ನು ನೆನೆಯುವ ಪದ)

2) ಚೊಕ್ಕ ಚೆಲುವಿನ ಚೆಲುವೆ ಜೋ ಯೇ
ಮ್ಮಕ್ಕ ಮುದ್ದಿನ ಮುದ್ದೆ ಜೋ ಬಾ |
ಳಕ್ಕ ಮಹಾದೇವಿಯಕ್ಕ ಜೋ ಜೋಯೆಂದು ಜೋಗುಳವ |
(ಅಕ್ಕನನ್ನು ಕುರಿತು ಜೋಗುಳ ಪದ)

3) ಮಲ್ಲಿಗೇ ಹೂವೇ ಇಲ್ಯಾಕೆ ನಿಂತಿದ್ದಿ
ಎಲ್ಲರ ಕಣ್ಣು ನಿನ ಮ್ಯಾಲೆ | ಕಂದಮ್ಮ
ವಲ್ಲಿ ಸೆರಗೆಲ್ಲ ಪರಿಮಳ |
ಕಟ್ಟಾಣಿ ಕಟ್ಟ್ಯಾಳ ಕಟ್ಟೆ ಮ್ಯಾಲೆ ನಿಂತಾಳೆ
ಬಟ್ಟಲಗಣ್ಣ ತಿರುವ್ಯಾಳೆ | ಕಂದಮ್ಮ
ದೃಷ್ಟಿ ಸೋಂಕ್ಯಾವೆ ಒಳಗೋಗ |
(ಅಕ್ಕನ ಸೌಂದರ್ಯವನ್ನು ಕುರಿತು ಹಾಡುವ ಪದ)

4) ಉಡತಡಿಯೊಳಗೆ | ಚೆಲ್ವ ನುಡಿವ ಹೆಸರಲ್ಲಿ
ನಡೆದು ಬಂದಳು.| ಭಕ್ತಿ | ವಿಡಿದು ಮರ್ತ್ಯಕೆ
ಅಕ್ಕಮಾದೇವಿ | ಎಂಬ ಚೊಕ್ಕ ಹೆಸರಿಲಿ
ಅಕ್ಕರಿಂದಲಿ. ಭಕ್ತಿ | ಉಕ್ಕಿ ಬಂದಳು

ಆಕಳ ಬಲಗೊಂಡೆ ಅಕ್ಕಮ್ಮನ ಬಲಗೊಂಡೆ
ಅಕ್ಕಮಹಾದೇವಿ ಬಲಗೊಂಡೆ | ಕೊ | ಕೆರೂರ
ಅಕ್ಕದ್ಯಾಮವ್ವ ಬಲಗೊಂಡೆ | ಕೊ| ಕೆರೂರ
ಅಕ್ಕದ್ಯಾಮವ್ವ ಬಲಗೊಂಡೆ
('ಅಕ್ಕ'ನ ಪ್ರಸ್ತಾಪ ಬರುವ ಕೋಲಾಟದ ಪದ)

## ಅಕ್ಕಮಹಾದೇವಿಯವರ ಇನ್ನು ಕೆಲವು ಜನಪದ ಸಾಹಿತ್ಯ ಸಂಗ್ರಹ

1) "ವಯದಾಗ ಸಣ್ಣಾಕಿ I ಗುಣದಾಗ ದೊಡ್ಡಾಕಿ
ಮಾಯಾ ಮೋಹವ ಬಿಟ್ಟಾಕಿ I ಮಾದೇವಿ
ಕಾಯದ ಗುಣವ ಸುಟ್ಟಾಕಿ II

ಉಡುತಡಿ ಕೂಸಾಗಿ ಶರಣರ ಮಗಳಾಗಿ
ಕದಳಿ ಊರಿನ ಸೊಸೆಯಾಗಿ | ಮಾದೇವಿ

ಎಲ್ಲರ ಬಾಯಾಗ ಅಕ್ಕಾಗಿ ॥

ಗಟ್ಟಿಯಾ ನಿಲುವದು ದಿಟ್ಟ ತಾ ಹೆಜ್ಜೆಯು
ಉಟ್ಟಿದಾ ವಸ್ತ್ರ ಕಿತ್ತೊಗೆದು । ಮಾದೇವಿ
ಸುಟ್ಟಾಳ ಕಾಮ-ಕ್ರೋಧವ ||

ಶಿವಯೋಗಿ ಮಾದೇವಿ | ಶಿವಯೋಗ ಕಲಿಸ್ಯಾಳ
ಅವಯವ ಒಂದು ಮಾಡ್ಯಾಳ | ಲಿಂಗದಾಗ
ಶಿವನೇ ತಾನು ಆಗ್ಯಾಳ ||

ಕದಳಿಯ ಬನದಾಗ | ಚನ್ನನ ಜೊತೆಯಾಗ
ಕೂಡಿ ತಾ ಮಾಡಿ ಸಂಸಾರ || ಮಾದೇವಿ
ಸಾಧಿಸಿ ತೋರಿ ತನ ನಿಲುವ ||"

2) "ಅಕ್ಕ ನಿನ್ನ ಹಾಡು ಎತ್ತಿ ನಾ ಹಾಡಿದರ
ಗಕ್ಕಂತ ಪಾಪ ಕಳದಾವ | ಕೈಲಾಸ
ಪಕ್ಕsಕ-ಬಂದು ನೆಲಸ್ಯಾವ ॥

ಉಡುತಡಿಯೆಂಬುದು ಮಡಿಯಾಯ್ತು
ನಿನ್ನಿಂದ ಸಡಗರ ನೋಡಾಕ ಶಿವಬಂದ | ಮಾದೇವಿ
ಅಡಿಯಾದ ನಿನ್ನ ಭಕುತಿಗಿ ॥

ಮಾದೇವಿ ಕೂದಲು ಕರಿಮೋಡ ಇಳಿದ್ಹಾಂಗ
ಕರಿಸರ್ಪ ಹಾಯ್ದು ನಡದ್ಹಾಂಗ । ಬೆನ್ನಹಿಂದ
ಕರಿಬೆಟ್ಟದ್ಹಾಂಗ ಕಂಡಾವ ॥

"ಕಲ್ಯಾಣ ಎಂಬುದು ಸನಿ ಅದ
ಕದಳಿ ಎಂಬುದು ದೂರ ಅದ |
ಕದಳಿಯಹಾದಿ ಕಲ್ಯಾಣ್ಣಾಗ ಅರತು
ಮುಂದಕ ನಡದಾಳ ಮಾದೇವಿ

ಕದಳಿಯೆಂಬುದು ಭವಘೋರ
ತಿಳಿಲಾಕ ಬಂದಾತು ಮುಪ್ಪರ |
ತಿಳಿದಾಳ ಹಾದಿ ಬಲುಬೇಗ ಮಾದೇವಿ
ಸಾಧಿಸಿ ತೋರಿಸ್ಯಾಳ ಅದರಾಗ

ಹಾವದ ಹುಲಿ ಅದ ಕರಡಿ ಒಳಗ ಕುಂತದ
ಹಾವಿನ ವಿಷವ ಇಳಿಸ್ಯಾಳ |
ಹುಲಿಯ ಮೀಸೆಯ ತಿರುವ್ಯಾಳ
ಕರಡಿಯ ಕೂದಲು ಕಿತ್ತಾಳ

ಸುತ್ತೆಲ್ಲ ಕತ್ತಲು ಒಬ್ಬಳೇ ಕುಂತಾಳ
ಬೆಳಕಾಗ ಹರದಾದ ಒಳಗೆಲ್ಲ |

ಬೆಳಕಿನ ಒಳಗ ಕಂಡಾಳ ಶಿವನಿಗಿ
ಕದಳಿ ಎಂಬುದನ್ನ ಗೆದ್ದಾಳ

3) "ಯಾರಿಗೇನ ಮಾಡಿದ ಶಿವ |
ಶಿವಲಿಂಗಕ ಮಜ್ಜನವ ಮಾಡಿದ ||ಪ||

ಕೈಲಾಸಕ ಹೋದವರು ಶಿವಶಿವ | ಎಲ್ಲಿ ಹುಡುಕಿದರಿಲ್ಲ ಶಿವ ನನ್ನ ಊರಾಗ ಹಾಳ
ಶಿವ | ಮಹಾಗಾಂವದಾಗ ಹಾಳ ಮಾದೇವಿ ಕಂಡು ಬಂದಾಳ ಕೈಲಾಸ||1||

ಮಾಗಾಯಿ ಊರುಚಂದ ಶಿವಶಿವ | ಮಾವಿನಗಿಡ ಚೆಂದ ಅಕ್ಕಮಾದೇವಿ ಗುಡಿಚಂದ |
ಗುಡಿಮುಂದ
ಭಜನ್ಯಾಗ ಮಹಾಲಿಂಗನ ದನಿ ಚಂದ||2||

ಹಾಸಿಗಿ ಹಾಸಿರಲಿ ಶಿವಶಿವ | ಕೂಸಲ್ಲಿ ಮಲಗಿರಲಿ
ಸಂಪೀಗಿ ಹೂವಿರಲಿ ಮನದಾಗ | ಶಿವಶಿವ
ಹಡದಮ್ಮನ ಮಾತಿರಲಿ ಮನದಾಗ||3||

## ಅರ್ಜುನ ಜೋಗಿ ಹಾಡುಗಬ್ಬ

ಶರಣು ಶರಣೆಂಬುವೆವು ಹರಣ ಹಾರುವ ತನಕ
ಶರಣ ಶರಣೆ ಮಾದೇವಿ | ನಮ್ಮಗಿನ್ನು
ಹರಸಿರಿ ಹುಲುಸು ಹುಲ್ಲುಲ್ಲಿಗೋ